


ಆಗಲಿ, ಮಂಡಿ ಮುರಿದು ಬಿದ್ದರೂ ಸರಿ ಎಂದು ಎಲ್ಲೆಲ್ಲೋ ಯಾತ್ರೆ ಮಾಡಿ, ರಾಜಿಯನ್ನೂ, ನಿನ್ನನ್ನೂ ಕಂಡು, ಸಂಸಾರ ಸಮೇತ ಊರಿಗೆ ಕರೆಯೋಣ ಅಂತ ಬಂದೆ,' ಅಂದವನು ಹೆಗಲ ಬಟ್ಟೆಯ ಬ್ಯಾಗಿನಿಂದ 'ಇಕಾ ಪ್ರಸಾದ,' ಎಂದು ಲಾಡು ಉಂಡೆಯ ಚೂರುಗಳನ್ನು, ಒಣಗಿದ ಹೂ ಪತ್ರೆಯನ್ನು ಕೈಗಿಟ್ಟು, ಹಾಗೆಯೇ ಸಣ್ಣ ಪೊಟ್ಟಣವನ್ನು ಬಿಚ್ಚಿ ಕುಂಕುಮವನ್ನು ಹಣೆಗಿಟ್ಟು 'ಶೀನಿ, ನಿನ್ನ ಸೈಟು, ಮನೆ, ಬಾಡಿಗೆ ಬಿಜಿನೆಸ್ಸು, ಲೇವಾದೇವಿ ಹೆಂಗೆ ನಡೀತಾ ಇದೆಯಯ್ಯಾ?' ಎಂದ.